20400058

# KANNADA

*Maximum Marks: 80*
*Time Allotted: Three Hours*
*Reading Time: Additional Fifteen Minutes*

20400058 20400058 20400058

## Instructions to Candidates

1. You are allowed an **additional fifteen minutes** for **only** reading the question paper.
2. You must **NOT** start writing during reading time.
3. This question paper has **8 printed pages**.
4. It is divided into **two sections: Section A and Section B**.
5. It has **fifteen questions** in all.
6. **Section A** has **three questions.** All questions are compulsory.
7. While attempting **Multiple Choice Questions** in Section A, you are required to **write only ONE option as the answer.**
8. **Section B** has **twelve questions**. You are required to attempt **any four** questions in this section on **any three** out of the four prescribed textbooks.
9. The intended marks for questions are given in brackets [ ].

## Instruction to Supervising Examiner

1. Kindly read **aloud** the Instructions given above to all the candidates present in the examination hall.

SEAL


*© Copyright reserved.*

## SECTION A
## LANGUAGE - 40 MARKS

**Question 1** **[15]**

**Write a composition in approximately 400 words in Kannada on any *one* of the topics given below.**

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿ 400 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

(i) 'ಶಿಕ್ಷಣದಲ್ಲಿ ಚಟುವಟಿಕೆಗಳ ಪಾತ್ರ' ವಿದ್ಯಾರ್ಥಿಗಳಿಗೆ ಸಹಪಠ್ಯ ಚಟುವಟಿಕೆಗಳ ಮಹತ್ವ ಈ ಕುರಿತಾಗಿ ಒಂದು ಪ್ರಬಂಧ ಬರೆಯಿರಿ.

(ii) ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಇದರ ಬಗ್ಗೆ ನಿಮ್ಮ ಅಭಿಪ್ರಾಯ ಅನಿಸಿಕೆಗಳನ್ನು ವಿವರಿಸಿ ಬರೆಯಿರಿ.

(iii) 'ಪರಿಸರ ಮಾಲಿನ್ಯಕ್ಕೆ ಪ್ಲಾಸ್ಟಿಕ್ ಮಾರಕವಾಗಿದೆ' ಇದನ್ನು ಹೇಗೆ ತಡೆಗಟ್ಟಬಹುದು ಎಂಬುದರ ಬಗ್ಗೆ ಚರ್ಚಿಸಿ.

(iv) ವ್ಯಕ್ತಿ ಹಾಗೂ ಸಮಾಜದ ಹಿನ್ನಡೆಗೆ ಸಾಮಾಜಿಕ ಪಿಡುಗುಗಳೇ ಕಾರಣ ಇದರ ಕುರಿತಾಗಿ ಒಂದು ಪ್ರಬಂಧ ಬರೆಯಿರಿ.

(v) 'ರೈತನೇ ದೇಶದ ಬೆನ್ನೆಲುಬು' ಎನ್ನುತ್ತಾರೆ. ಆದರೆ ಇಂದು ರೈತರು ತಮ್ಮ ಕೃಷಿ ಕೆಲಸದಲ್ಲಿ ಏನೆಲ್ಲ ತೊಂದರೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಚರ್ಚಿಸಿ ಬರೆಯಿರಿ.

(vi) ಕೆಳಗೆ ನೀಡಲಾಗಿರುವ ಯಾವುದಾದರೊಂದು ವಿಷಯದ ಬಗ್ಗೆ ಮೂಲಕಥೆ ಬರೆಯಿರಿ.

(a) 'ಆಪತ್ತಿಗಾದವನೇ ನೆಂಟ' ಈ ಹೇಳಿಕೆಯನ್ನು ಕುರಿತಂತೆ ಒಂದು ಸ್ವಕಲ್ಪಿತ ಕತೆಯನ್ನು ಬರೆಯಿರಿ.

(b) 'ನನ್ನ ನಂಬಿಕೆ ಸುಳ್ಳಾಗಲಿಲ್ಲ' ಈ ವಾಕ್ಯದಿಂದ ಮುಕ್ತಾಯವಾಗುವ ಒಂದು ಕಥೆ ಅಥವಾ ಘಟನೆಯನ್ನು ವಿವರಿಸಿ.

**Question 2**

**Read the passage given below carefully and answer the questions that follow, using your own words in Kannada.**

**ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.**

ವಜ್ರ ಭಾರತದ ಪ್ರಗತಿದಾಯಕ ಉದ್ಯಮ. ಶೃಂಗಾರ ಸಾಧನವೂ ಹೌದು. ಇದರ ಬೆಲೆ ಮುಗಿಲು ಮುಟ್ಟುವಷ್ಟು ಸಾಮಾನ್ಯನಿಗೆ ಕನಸಿನಲ್ಲೂ ಎಟುಕದ ವಸ್ತು, ಕೈಗಾರಿಕಾ ಉದ್ಯಮ ರಂಗದಲ್ಲೂ ವಜ್ರದ ಬೇಡಿಕೆ ಹೆಚ್ಚುತ್ತಿದೆ. ಪ್ರಪಂಚದ ಖ್ಯಾತ ವಜ್ರಗಳು ದೊರೆತದ್ದು ಭಾರತದಲ್ಲಿ, ಇದು ವಜ್ರಗಳ ಐತಿಹಾಸಿಕ ಕೇಂದ್ರ. ವಜ್ರಕ್ಕಾಗಿ ವಿಶ್ವದಾದ್ಯಂತ ಯುದ್ಧಗಳೇ ನಡೆದಿವೆ. ಕೊಲೆ ಸುಲಿಗೆಗಳಾಗಿವೆ. ರಾಜ್ಯಗಳು ಉರುಳಿ ಅಧಿಕಾರ ಕಳೆದುಕೊಂಡವರಿದ್ದಾರೆ. ಇಂತಹ ವಿಶಿಷ್ಟ ಗುಣವುಳ್ಳ ವಜ್ರದ ಇತಿಹಾಸ ರಮ್ಯವಾಗಿದೆ.

ಅತಿ ಬೆಲೆಬಾಳುವ ಅತ್ಯಂತ ಆಕರ್ಷಣೀಯವೂ ಆದ ವಜ್ರ ಮೂಲದಲ್ಲಿ ಇಂಗಾಲದ ರೂಪ. ಇದರಲ್ಲಿ ಇಂಗಾಲದ ಪರಮಾಣುಗಳು ನಾಲ್ಕು ಮುಖಗಳಿಂದ ಒಂದನ್ನೊಂದು ಹಿಡಿದಿರುವುದರಿಂದ, ಇದಕ್ಕೆ ಇಂತಹ ಬೆಳಕಿನ ಪ್ರತಿಫಲನ ಶಕ್ತಿ ಮತ್ತು ಗಡಸುತನ ಎರಡೂ ಬಂದಿದೆ. ಭೂಮಿಯ ಆಳದಲ್ಲಿ ಜ್ವಾಲಾಮುಖಿಗಳಲ್ಲಿ ಇಂಗಾಲವು ಸೇರಿ, ಹೆಚ್ಚಿನ ಶಾಖ ಮತ್ತು ಒತ್ತಡದಿಂದ ವಜ್ರದ ಹರಳು ರೂಪ ತಾಳುತ್ತದೆ. ಇಂತಹ ಜ್ವಾಲಾಮುಖಿಗಳು ಆರಿ ಹೋಗಿ ಸಾವಿರಾರು ವರ್ಷಗಳ ನಂತರ ಮಳೆ, ನದಿ ನೀರುಗಳಿಂದ ವಜ್ರಗಳು ಕೊಚ್ಚಿ ಹೋಗಿ ಅಲ್ಲಿನ ದಡಗಳಲ್ಲಿ ಕಾಣಸಿಗುತ್ತವೆ. ಇಲ್ಲವೇ ಆರಿದ ಜ್ವಾಲಾಮುಖಿಗಳಲ್ಲಿ ಸಿಕ್ಕಿಬಿದ್ದಿರುವ ವಜ್ರಗಳನ್ನು ಗಣಿತೋಡಿ ಹೊರ ತರಬೇಕಾಗುತ್ತದೆ.

ಗಣಿಗಳಲ್ಲಿ ವಜ್ರದ ಅದಿರಿನಿಂದ ಕೂಡಿದ ಕಲ್ಲುಗಳನ್ನು ತೆಗೆದು ಪುಡಿ ಮಾಡಿ ನೀರಿನಿಂದ ಕೊಚ್ಚಿ ಜಾಲಿಸುತ್ತಾರೆ. ಮಣ್ಣು ಮತ್ತಿತರ ವಸ್ತುಗಳು ತೊಳೆದ ನಂತರ ಹರಳುಗಳಿಂದ ಕೂಡಿದ ಕಲ್ಲುಗಳನ್ನು ಗ್ರೀಸ್ ಸವರಿ ತಗಡುಗಳ ಮೇಲೆ ಹಾಯಿಸುವಾಗ ವಜ್ರಗಳು ಮಾತ್ರ ಗ್ರೀಸ್‌ಗೆ ಅಂಟಿಕೊಂಡು ಉಳಿದ ಕಲ್ಲುಪುಡಿಗಳು ಜಾರಿ ಹೋಗುತ್ತವೆ. ನಂತರ ಆರಿಸಿದ ವಜ್ರದ ಹರಳುಗಳನ್ನು ಆಮ್ಲದಲ್ಲಿ ತೊಳೆದು ಶುದ್ಧೀಕರಿಸುತ್ತಾರೆ. ಒಂದು ಕ್ಯಾರೆಟ್ ತೂಕದ ಹರಳನ್ನು ತೆಗೆಯಲು ಸರಾಸರಿ ನಾಲ್ಕು ಟನ್ ಅದಿರನ್ನು ತೆಗೆದು ಸ್ವಚ್ಛ ಮಾಡಬೇಕಾಗುತ್ತದೆ. ಹೀಗೆ ತೆಗೆದ ಎಲ್ಲಾ ಹರಳುಗಳು ಆಭರಣಗಳ ಬಳಕೆಗೆ ಬರುವುದಿಲ್ಲ. ಅವುಗಳಲ್ಲಿ ಪ್ರತಿಶತ 80 ಭಾಗ ಅಮೂಲ್ಯ ಹರಳುಗಳೆನಿಸದೆ ಕೈಗಾರಿಕೆಗೆ ಬಳಕೆಯಾಗುತ್ತದೆ. ಉಳಿದ ಅಲ್ಪ ಭಾಗ ಮಾತ್ರ ವಜ್ರಗಳೆಂದು ಕರೆಯಲ್ಪಡುತ್ತವೆ. ಹೀಗೆ ಗಣಿಗಳಿಂದ ತೆಗೆದ ಒರಟು ವಜ್ರಗಳನ್ನು ಪುನಃ ಕಡೆದು ಸಾಣೆ ಹಿಡಿಯುವಾಗ ಬಹುಪಾಲು ಕರಗಿ ಹೋಗುತ್ತದೆ. ಅಂದರೆ ಈ ಉದ್ಯಮದಲ್ಲಿ ಶ್ರಮ ಮತ್ತು ವೆಚ್ಚ ಎಷ್ಟಿದೆ ಎಂದು ಅಂದಾಜಾಗುತ್ತದೆ.

(i) ವಜ್ರದ ವಿಶಿಷ್ಟ ಗುಣಗಳಾವುವು? [3]

(ii) ವಜ್ರದ ಮೂಲರೂಪ ಹೇಗಿರುತ್ತದೆ? ಇದು ಹೇಗೆ ಹರಳು ರೂಪ ತಾಳುತ್ತದೆ? [3]

(iii) ಗಣಿಗಳಿಂದ ತೆಗೆದ ವಜ್ರಗಳನ್ನು ಹೇಗೆ ಶುದ್ಧೀಕರಿಸುತ್ತಾರೆ? [3]

(iv) ಕೈಗಾರಿಕಾ ಉದ್ಯಮ ರಂಗದಲ್ಲೂ ವಜ್ರದ ಬೇಡಿಕೆ ಹೆಚ್ಚುತಿದೆ.

(a) ಪ್ರಪಂಚದ ಖ್ಯಾತ ವಜ್ರಗಳು ದೊರೆತದ್ದು [1]

(1) ಚೀನಾದಲ್ಲಿ

(2) ಭಾರತದಲ್ಲಿ

(3) ಜಪಾನ್‌ನಲ್ಲಿ

(4) ಅಮೇರಿಕಾದಲ್ಲಿ

(b) ಒಂದು ಕ್ಯಾರೆಟ್ ತೂಕದ ಹರಳನ್ನು ತೆಗೆಯಲು ಅಗತ್ಯವಿರುವ ಸರಾಸರಿ ಅದಿರು [1]

(1) ಒಂದು ಟನ್

(2) ಎರಡು ಟನ್

(3) ಮೂರು ಟನ್

(4) ನಾಲ್ಕು ಟನ್

(c) ಹರಳುಗಳಿಂದ ಕೂಡಿದ ಕಲ್ಲುಗಳಿಗೆ ಯಾವುದನ್ನು ಸವರಿ ತಗಡುಗಳ ಮೇಲೆ ಹಾಯಿಸುತ್ತಾರೆ? [1]

(1) ಗ್ರೀಸ್

(2) ನೀರು

(3) ಮಣ್ಣು

(4) ಎಣ್ಣೆ

(v) ವಜ್ರಕ್ಕಾಗಿ ಯುದ್ಧಗಳು, ಕೊಲೆ ಸುಲಿಗೆಗಳಾಗಿವೆ.

(a) 'ಸುಲಿಗೆ' ಇದಕ್ಕೆ ಸಮಾನ ಅರ್ಥ ಕೊಡುವ ಪದ [1]

(1) ಕೂಳು

(2) ಕೊಳೆ

(3) ಕೊಳ್ಳೆ

(4) ಸೀಳು

(b) ಶಾಖ ಎಂದರೆ [1]

(1) ಶಕ್ತಿ

(2) ಶ್ರಮ

(3) ಬಿಸಿ

(4) ಬೆವರು

(c) ವಜ್ರಗಳ ಇತಿಹಾಸವು [1]

(1) ಗಮ್ಯವಾಗಿದೆ

(2) ಸೌಮ್ಯವಾಗಿದೆ

(3) ಗಂಭೀರವಾಗಿದೆ

(4) ರಮ್ಯವಾಗಿದೆ

**Question 3**

(A) **Answer the following questions as per the instructions given.**
**ಕೆಳಗಿನ ಪ್ರಶ್ನೆಗಳಿಗೆ ಸೂಚನೆಯ ಪ್ರಕಾರ ಉತ್ತರಿಸಿ.**

(i) ಕೆಳಗಿನ ವಾಕ್ಯದ ಶುದ್ಧರೂಪ ಬರೆಯಿರಿ. [1]
ಎಜಮಾನ ಪೇಟೆಗೆ ಹೋದಳು

(ii) ಬಿಟ್ಟು ಹೋಗಿರುವ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆಯಿರಿ. [1]
ಜಿಂಕೆಯು ಬಾಣ ____________ ಹೊಡೆತದಿಂದ ತಪ್ಪಿಸಿಕೊಂಡಿತು.

(iii) ಕೆಳಗಿನ ವಾಕ್ಯಗಳಲ್ಲಿ ಸರಿಯಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಹುಲಿಗಳು ಹಗಲಿನ ಬಹುಭಾಗ ನಿದ್ರಿಸುತ್ತಾರೆ.

(b) ಬಹುಭಾಗ ಹುಲಿಗಳು ಹಗಲಿನ ನಿದ್ರಿಸುತ್ತದೆ.

(c) ಹುಲಿಗಳು ಹಗಲಿನ ಬಹುಭಾಗ ನಿದ್ರಿಸುತ್ತವೆ

(d) ಹಗಲಿನ ಹುಲಿಗಳು ನಿದ್ರಿಸುತ್ತವೆ ಬಹುಭಾಗ

(iv) ತಪ್ಪಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ನಮ್ಮ ಪೂರ್ವಜರು ಭೂಮಿಗೆ ತಾಯಿಯ ಅಭಿದಾನ ನೀಡಿದ್ದರು.

(b) ಪೂರ್ವಜರು ಭೂಮಿಯನ್ನು ತಾಯಿಯಂತೆ ಪೂಜಿಸುತ್ತಿದ್ದರು.

(c) ಭೂಮಿಯ ಮೇಲೆ ಎಲ್ಲೆಂದರಲ್ಲಿ ವಾಯುವಿಗೆ ಕೊರತೆಯಿದೆ.

(d) ನಾವು ಕುಡಿಯುವ ನೀರು ಭೂಮಿಯಿಂದ ದೊರೆಯುತ್ತದೆ.

(v) ಕೆಳಗಿನ ವಾಕ್ಯದಲ್ಲಿ ಗೆರೆ ಎಳೆದ ಪದದ ಇನ್ನೊಂದು ಅರ್ಥ ಬರೆಯಿರಿ. [1]

ಎಲ್ಲರ <u>ಲಕ್ಷ್ಯ</u> ಈಗ ಗುರುಗಳ ಮೇಲಿತ್ತು.

(a) ನಗು

(b) ಗಮನ

(c) ಮನ

(d) ಕೂಗು

**(B) Use the idioms in the sentences as per the instructions given.**
**ಕೆಳಗಿನ ಭಾಷಾವೈಶಿಷ್ಟ್ಯಗಳನ್ನು ಗಮನಿಸಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.**

(i) ಕೆಳಗಿನ ನುಡಿಗಟ್ಟಿನ ಅರ್ಥ ಬರೆಯಿರಿ. [1]

ಕಪಿಮುಷ್ಟಿ

(ii) ಕೆಳಗಿನವುಗಳಲ್ಲಿ ಸರಿಯಾದ ನುಡಿಗಟ್ಟನ್ನು ಆರಿಸಿ ಬರೆಯಿರಿ. [1]

(a) ಕೈಗೆ ಬುದ್ಧಿಹೇಳು

(b) ಹುಬ್ಬುಗಂಟಿಕ್ಕು

(c) ಮೈಯೆಲ್ಲಾ ಕಿವಿಯಾಗು

(d) ನರಳಾಟ

(iii) ಕೆಳಗಿನ ವಾಕ್ಯಕ್ಕೆ ಸರಿಹೊಂದುವ ನುಡಿಗಟ್ಟನ್ನು ಆರಿಸಿ ಬರೆಯಿರಿ. [1]

ಕೌರವರ ಹೆಸರೆತ್ತಿದ ಕೂಡಲೇ ಭೀಮನು ಕೋಪದಿಂದ ಕೂಗಾಡುತ್ತಿದ್ದ.

(a) ಕುಗ್ಗಿಹೋಗು

(b) ಕಾಲಿಗೆ ಬುದ್ಧಿಹೇಳು

(c) ಕುಣಿದಾಡು

(d) ಉರಿದು ಬೀಳು

(C) **Use the proverbs in the sentences as per the instructions given.**
**ಕೊಟ್ಟಿರುವ ಗಾದೆ ಮಾತನ್ನು ಸೂಚನೆಯಂತೆ ಬರೆಯಿರಿ.**

(i) ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ. [1]

ಉತ್ತರನ ಪೌರುಷ ____________

(a) ಒಲೆಯ ಮುಂದೆ

(b) ಮನೆಯ ಮುಂದೆ

(c) ಜನರ ಮುಂದೆ

(d) ಪ್ರಜೆಗಳ ಮುಂದೆ

(ii) ಕೆಳಗಿನವುಗಳಲ್ಲಿ ಸರಿಯಾದ ಗಾದೆಯನ್ನು ಆರಿಸಿ ಬರೆಯಿರಿ. [1]

(a) ಬಡವನ ಕೋಪ ಕವಡೆಗೆ ಮೂಲ

(b) ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ

(c) ಅಡಿಕೆಗೆ ಹೋದ ಮಾನ ಆಮೆ ಕೊಟ್ಟರು ಸಿಗದು

(d) ಮನೆಗೆ ಮಾರಿ ಊರಿಗೆ ದಾರಿ

## SECTION B
## LITERATURE – 40 MARKS

***Answer any four questions from this section on any three out of the four prescribed textbooks.***

***ನಿಗದಿತ ನಾಲ್ಕು ಪಠ್ಯಪುಸ್ತಕಗಳಲ್ಲಿ ಯಾವುದಾದರೂ ಮೂರರಲ್ಲಿ ಈ ವಿಭಾಗದಿಂದ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.***

### ಕನ್ನಡ ಕಿರಣ (KANNADA KIRANA)

**Question 4**

"ಶೀಲೀ.... ಶೀಲೀ...." ಎಂದು ಮಣ್ಣುದಿಬ್ಬದ ಮೇಲಿನಿಂದ ಒಬ್ಬ ಹುಡುಗ ಕೂಗತೊಡಗಿದ. ಹುಡುಗಿ "ಬಾ ಸೋನ್ಯಾ" ಎಂದು ಮಾರುತ್ತರಿಸಿದಳು.

(i) ಸೋನ್ಯಾ ಕೈಯಲ್ಲಿ ಏನನ್ನು ಎತ್ತಿಕೊಂಡು ಗುಡಿಸಲಿನ ಕೆಳಗಿಳಿದು ಬಂದ? [1]

(ii) 'ಹೊಟ್ಟೆ ಹಸಿತದಾ' ಎಂದು ಶೀಲಿ ಕೇಳಿದಾಗ ಸೋನ್ಯಾ ಮಾತನಾಡಲಿಲ್ಲ ಏಕೆ? [2]

(iii) ಶೀಲಿ ಅಳುತ್ತಾ ಬಿದ್ದುಕೊಳ್ಳಲು ಕಾರಣವೇನು? [2]

(iv) ವಾಗೀಶಿ ಯಾರು? ಮಳೆಗಾಳಿಗೆ ಗುಡಿಸಲೊಂದು ಬಿದ್ದಾಗ ಅವಳು ವರ್ತಿಸಿದ ಬಗೆ ಹೇಗೆ? [5]

204000582040005820400058

**Question 5** **[10]**

ದೇವತೆಯ ಸ್ವಾಗತಕ್ಕಾಗಿ ಮಾನವರು ಸಿದ್ಧತೆ ಮಾಡಿಕೊಂಡ ರೀತಿ ಮತ್ತು ದೇವತೆಯ ಆಗಮನವಾದಾಗ ಜನರ ಪ್ರತಿಕ್ರಿಯೆ ಹೇಗಿತ್ತು?

**Question 6** **[10]**

ರವಿ ತನ್ನ ತಾಯಿಯಲ್ಲಿ ತಪ್ಪೊಪ್ಪಿಕೊಂಡ ಬಗೆಯನ್ನು ವಿವರಿಸಿ.

## ಕಾವ್ಯ ಸುಧೆ (KAVYA SUDHE)

**Question 7**

'ತಾಲಿಮ್ಯಾಲ ಹೊರಿಯೊಂದ / ಬಗಲಾಗ ಕೂಸೊಂದ
ಬಂದಾಳ ಬಾಲಿ ಬಂದಾಳ / ಹೊಲದಿಂದ ಬಂದಾಳ'

(i) ಕವಿ ಮಧುರ ಚೆನ್ನ ಅವರ ಪ್ರಕಾರ ಸುಖಜೀವನ ಎಂದರೇನು? [1]

(ii) ಬಾಲೆ ಲಗುಬಗೆಯಿಂದ ಮನೆಯ ಕಡೆ ಹೊರಟ ರೀತಿ ಹೇಗಿತ್ತು? [2]

(iii) ಮನೆಗೆ ಬಂದ ಬಾಲೆ ಹೇಗೆ ತನ್ನ ಕೆಲಸದಲ್ಲಿ ನಿರತಳಾದಳು? [2]

(iv) ಬಾಲೆಗೆ ಯಾರ ಕನಸಾಯಿತು? ವಿವರಿಸಿ. [5]

**Question 8** **[10]**

ಮನುಷ್ಯನು ಹೊಟ್ಟೆಪಾಡಿಗಾಗಿ ಯಾವ ಯಾವ ರೀತಿಯ ನಾಟಕವನ್ನಾಡುತ್ತಾನೆಂದು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ವಿವರಿಸಿದ್ದಾರೆ?

**Question 9** **[10]**

ನಮ್ಮ ಬಾಳ ಪಯಣವನ್ನು ಹೇಗೆ ಸಾಗಿಸಬೇಕೆಂದು ಕವಿ ಕುವೆಂಪುರವರು ದೋಣಿ ಹಾಡು ಪದ್ಯದಲ್ಲಿ ವಿವರಿಸಿದ್ದಾರೆ?

## ಪ್ರೇಮಭಿಕ್ಷು (PREMA BHIKSHU)

**Question 10**

"ಏನು ವಿಶೇಷ, ಆನಂದ?"
"ಕೋಟೆಯ ಕಡೆ ನೋಡಿ ಭಗವಾನ್"
"ಓ ಹೌದು, ಎಷ್ಟೊಂದು ಜನ ಸೈನಿಕರು ಸೇರಿದ್ದಾರೆ."

(i) ಮೇಲಿನ ವಾಕ್ಯದಲ್ಲಿ 'ಭಗವಾನ್' ಎಂದರೆ ಯಾರು? [1]

(ii) ಅಂಗುಲಿಮಾಲನ ಹೆಸರು ಕೇಳಿದೊಡನೆ ಬುದ್ಧನಿಗಾದ ಅನುಭವವೇನು? [2]

2040040058

(iii) ಶ್ರಾವಸ್ತಿ ನಗರವು ಹೇಗೆ ಕಳಾಹೀನವಾಗಿತ್ತು? [2]

(iv) ಅನಾಥಪಿಂಡಿಕನು ಅಂಗುಲಿಮಾಲನನ್ನು ಪರಿಚಯಿಸಿದ ರೀತಿಯನ್ನು ವಿವರಿಸಿ. [5]

**Question 11** [10]

ಮನಃಪರಿವರ್ತನೆಗೊಂಡ ಅಂಗುಲಿಮಾಲನಿಗೆ ಬುದ್ಧನು ಹೇಳಿದ ಮೊದಲ ಕತೆ ಯಾವುದು?

**Question 12** [10]

ವೈದೇಹಿಕೆಯ ಗುಣಪರೀಕ್ಷೆಯ ಕಥೆಯ ಸ್ವಾರಸ್ಯವನ್ನು ವಿವರಿಸಿ.

## ಹೆಬ್ಬೆರಳು (HEBBERALU)

**Question 13**

ಎಲೆ ಮರುಳೆ, ಮೊದಲೆ ಆರ್ಯಂ, ಮೇಲೆ ಪಾರ್ವನಾತಂ, ನಮಗೆ
ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೆ?

(i) ಈ ಮೇಲಿನ ಮಾತನ್ನು ಯಾರು ಯಾರಿಗೆ ಹೇಳಿದರು? [1]

(ii) ಹಿರಣ್ಯಧನು ಏಕಲವ್ಯನಿಗೆ ಏನೆಂದು ಹಾರೈಸುತ್ತಾನೆ? [2]

(iii) ಏಕಲವ್ಯನು ದ್ರೋಣರ ಮಣ್ಣಿನ ಮೂರ್ತಿಯ ಮುಂದೆ ಕುಳಿತು ಅಭ್ಯಾಸ ಮಾಡುವುದನ್ನು ಕಂಡಾಗ ಹಿರಣ್ಯಧನು ತನ್ನಲ್ಲೆ ಹೇಳಿಕೊಂಡಿದ್ದೇನು? [2]

(iv) ಹಿರಣ್ಯಧನು ಏಕಲವ್ಯನಿಗೆ ದ್ರೋಣರ ಬಳಿ ಹೋಗಬೇಡ ಎಂದು ಹೇಳಿದ ಬುದ್ಧಿವಾದವೇನು? [5]

**Question 14** [10]

ದ್ರೋಣಾಚಾರ್ಯರು ಜಗತ್ತಿನಲ್ಲಿ ಅರ್ಜುನನನ್ನು ಮೀರಿಸುವ ಇನ್ನೊಬ್ಬ ಪಾರ್ಥನಿಲ್ಲ ಎಂದಾಗ, ಅರ್ಜುನ, ಏಕಲವ್ಯ ಮತ್ತು ಗೊಂದಳದವರಲ್ಲಿ ನಡೆದ ಸಂಭಾಷಣೆಯನ್ನು ವಿವರಿಸಿ.

**Question 15** [10]

ಹೆಬ್ಬೆರಳನ್ನು ಕತ್ತರಿಸಿ ಗುರುದಕ್ಷಿಣೆಯಾಗಿ ಏಕಲವ್ಯನು ನೀಡಿದಾಗ, ದ್ರೋಣಾಚಾರ್ಯರು ಅವನಿಗೆ ಮಾಡಿದ ಶುಶ್ರೂಷೆ, ಇದನ್ನು ಕಂಡ ಹಿರಣ್ಯಧನುವಿನ ನೋವಿನ ಮಾತುಗಳು ಈ ನಾಟಕದಲ್ಲಿ ಹೇಗೆ ಮೂಡಿ ಬಂದಿದೆ ವಿವರಿಸಿ.